**ಓ.ಎಸ್‌ಃ 100/2021** **ಪಿಡಬ್ಲೂ-1 ಸುಂದರಮ್ಮ**

ದಿನಾಂಕಃ 04.03.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ 5ನೇ ಪ್ರತಿವಾದಿ ಪರ ಶ್ರೀ ಎಸ್.ಕೆ.ಎಸ್. ವಕೀಲರಿಂದಃ**

ದಾವಾ ಆಸ್ತಿಯನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಪಿತ್ರಾರ್ಜಿತ ಆಸ್ತಿಗಳು ಇರುವುದಿಲ್ಲ. ನನ್ನ ತಂದೆಗೆ ಒಂದು ಮನೆ ಇತ್ತು ಎಂದರೆ ಸರಿ. ಸದರಿ ಮನೆಯಲ್ಲಿ ಪ್ರತಿವಾದಿಗಳು ವಾಸವಾಗಿರುತ್ತಾರೆ ಎಂದರೆ ಸರಿ. ಸದರಿ ವಾಸದ ಮನೆಯನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಎಂದರೆ ಸರಿ. 5ನೇ ಪ್ರತಿವಾದಿಗೆ ನಾನು ಮತ್ತು ಉಳಿದ ಪ್ರತಿವಾದಿಯರು ಸೇರಿ ಸರ್ವೆ ನಂ. 175/3 ರ 3 ಎಕರೆ 20 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನೋಂದಾಯಿತ ಕರಾರು ಮಾಡಿಕೊಟ್ಟಿದ್ದೇವೆ ಎಂದರೆ ಸರಿ. ಸದರಿ ಜಮೀನನ್ನು ಈ ಪ್ರಕರಣದಲ್ಲಿ ಸೇರಿಸಿಲ್ಲ ಎಂದರೆ ಸರಿ. 5ನೇ ಪ್ರತಿವಾದಿ ಕ್ರಯ ಪತ್ರ ಬರೆದುಕೊಡುವಂತೆ ನನ್ನ ಮತ್ತು ಉಳಿದ ಪ್ರತಿವಾದಿಯರ ಮೇಲೆ ಅಸಲು ದಾವಾ ಸಂಖ್ಯೆಃ 123/2021 ರಂತೆ ಕೆಳ ನ್ಯಾಯಾಲಯದಲ್ಲಿ ದಾವಾ ಹೂಡಿರುತ್ತಾರೆ ಎಂದರೆ ಸರಿ. 5ನೇ ಪ್ರತಿವಾದಿ ಅಸಲು ದಾವಾ ಸಂಖ್ಯೆಃ 123/2021 ಅನ್ನು ದಾಖಲಿಸಿದ ನಂತರ ನಾನು ಉದ್ದೇಶ ಪೂರ್ವಕವಾಗಿ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯನ್ನು 2019 ರಲ್ಲಿ 1ನೇ ಪ್ರತಿವಾದಿ ಕುಟುಂಬದ ಅವಶ್ಯಕತೆಗಾಗಿ 5ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕುಟುಂಬದ ವ್ಯವಹಾರವನ್ನು 1ನೇ ಪ್ರತಿವಾದಿ ನೋಡಿಕೊಳ್ಳುತ್ತಾರೆ. ದಾವಾ ಆಸ್ತಿಯನ್ನು 5ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಇನ್ನೂ ಪಿತ್ರಾರ್ಜಿತ ಆಸ್ತಿಗಳು

ಇದ್ದರೂ ಸಹ 5ನೇ ಪ್ರತಿವಾದಿಗೆ ಮಾರಾಟ ಮಾಡಿರುವ ದಾವಾ ಆಸ್ತಿಯ ಮೇಲೆ ಮಾತ್ರ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಾಮರಾಜನಗರ.